THE TIMES OF INDIA

**KANNADA**

Saturday, December 12th, 2009

# ಯುಎಲ್ ಕಂಪನಿ ಜತೆ ಜೈನ್ ಗ್ರೂಪ್ ಒಪ್ಪಂದ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ಉತ್ಪನ್ನಗಳ ಸುರಕ್ಷತಾ ಪರೀಕ್ಷೆ ಹಾಗೂ ಮಾನ್ಯತೆ ಪ್ರಮಾಣ ಪತ್ರ ನೀಡುವ ಅಂಡರ್ ರೈಟರ್ಸ್ ಲ್ಯಾಬೋರೇಟರೀಸ್ (ಯುಎಲ್) ಕಂಪನಿ, ಜೈನ್ ಗ್ರೂಪ್ ಆಫ್ ಇನ್ಸಿಟಿಟ್ಯೂಟ್‌ನೊಂದಿಗೆ ಶುಕ್ರವಾರ ಒಡಂಬಡಿಕೆಗೆ ಸಹಿ ಹಾಕಿದೆ.

ಈ ಒಡಂಬಡಿಕೆಯಿಂದಾಗಿ ನಗರದಲ್ಲಿ ಅಗ್ನಿ ಸುರಕ್ಷತಾ ಪರೀಕ್ಷಾ ಹಾಗೂ ಸಲಹಾ ಕೇಂದ್ರ ಸ್ಥಾಪನೆಯಾಗಲಿದೆ. ಈ ಕೇಂದ್ರ ಅಗ್ನಿ ಶಾಮಕ ಉತ್ಪನ್ನಗಳನ್ನು ಪರೀಕ್ಷಿಸಲು ಅಗತ್ಯ ಸೌಲಭ್ಯ ಕಲ್ಪಿಸಲಿದೆ. ಜೈನ್ ವಿವಿಯ ಅಂತಾರಾಷ್ಟ್ರೀಯ ಕ್ಯಾಂಪಸ್‌ನಲ್ಲಿ ಕೇಂದ್ರ ಸ್ಥಾಪನೆಯಾಗಲಿದೆ.

ಅಗ್ನಿ ಸುರಕ್ಷತೆ ವಿಷಯಗಳಲ್ಲಿ ಸ್ನಾತಕೋತ್ತರ ಹಾಗೂ ಸಂಶೋಧನೆ ಕೈಗೊಳ್ಳುವ ವಿದ್ಯಾರ್ಥಿಗಳಿಗೂ ಈ ಕೇಂದ್ರ ಸೌಲಭ್ಯ ಒದಗಿಸಲಿದೆ.